## ಬೆನ್ ಸ್ಟೋಕ್ಸ್ ಸಾಮರ್ಥ್ಯಕ್ಕೆ ತಕ್ಕ ಬೆಲೆ

ಏಕದಿನ ಮತ್ತು ಟ್ವೆಂಟಿ–20 ಮಾದರಿಯಲ್ಲಿ ರನ್ ಗಳಿಸುವ ರೀತಿಯಲ್ಲಿಯೇ ಟೆಸ್ಟ್‌ನಲ್ಲಿಯೂ ಬ್ಯಾಟ್ ಬೀಸುವ ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ಅವರಿಗೆ ಐಪಿಎಲ್‌ನಲ್ಲಿ ನಿರೀಕ್ಷೆಯಂತೆಯೇ ಉತ್ತಮ ಬೆಲೆ ಲಭಿಸಿದೆ. ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್ ತಂಡ 14.5 ಕೋಟಿ ರೂಪಾಯಿಗೆ ಖರೀದಿಸಿದೆ.

ಹೋದ ವರ್ಷ ಭಾರತದಲ್ಲಿ ನಡೆದ ವಿಶ್ವ ಟ್ವೆಂಟಿ–20 ಟೂರ್ನಿಯ ಫೈನಲ್‌ನಲ್ಲಿ ವೆಸ್ಟ್ ಇಂಡೀಸ್ ತಂಡದ ಗೆಲುವಿಗೆ ಕೊನೆಯ ಓವರ್‌ನಲ್ಲಿ 19 ರನ್ ಅಗತ್ಯವಿತ್ತು. ಆಗ ಬೌಲಿಂಗ್ ಮಾಡಿದ್ದ ಸ್ಟೋಕ್ಸ್ ಸತತ ನಾಲ್ಕು ಸಿಕ್ಸರ್‌ಗಳನ್ನು ಬಿಟ್ಟುಕೊಟ್ಟು ಇಂಗ್ಲೆಂಡ್ ಕ್ರಿಕೆಟ್ ಪ್ರೇಮಿಗಳ ಪಾಲಿಗೆ ಖಳನಾಯಕರಾಗಿದ್ದರು. ಆದರೆ ಈಗ ಐಪಿಎಲ್ ಹರಾಜಿನಲ್ಲಿ ಅವರೇ ಹೀರೊ ಆಗಿದ್ದಾರೆ. ಅಷ್ಟೇ ಅಲ್ಲ ಐಪಿಎಲ್‌ನಲ್ಲಿ ಹೆಚ್ಚು ಬೆಲೆಗೆ ಮಾರಾಟವಾದ ಮೊದಲ ವಿದೇಶಿ ಕ್ರಿಕೆಟಿಗ ಎನ್ನುವ ಕೀರ್ತಿ ಕೂಡ ಹೊಂದಿದ್ದಾರೆ.

ಆಲ್‌ರೌಂಡರ್ ಆಗಿ ಗುರುತಿಸಿಕೊಂಡಿರುವ ಸ್ಟೋಕ್ಸ್ ವೇಗವಾಗಿ ರನ್ ಗಳಿಸುವಲ್ಲಿ ನಿಪುಣರು. ಟೆಸ್ಟ್‌ನಲ್ಲಿ ವೇಗವಾಗಿ ದ್ವಿಶತಕ ಗಳಿಸಿದ ವಿಶ್ವದ ಎರಡನೇ ಬ್ಯಾಟ್ಸ್‌ಮನ್, ವೇಗವಾಗಿ 250 ರನ್ ಗಳಿಸಿದ ವಿಶ್ವದ ಮೊದಲ ಆಟಗಾರ, ಟೆಸ್ಟ್‌ನ ಒಂದೇ ಇನಿಂಗ್ಸ್‌ನಲ್ಲಿ ಹೆಚ್ಚು (11) ಸಿಕ್ಸರ್‌ಗಳನ್ನು ಹೊಡೆದ ದಾಖಲೆ ಹೀಗೆ ಅನೇಕ ಸಾಧನೆಗಳನ್ನು ಅವರ ಹೆಸರಿನಲ್ಲಿವೆ.

ಆದ್ದರಿಂದ ಸ್ಟೋಕ್ಸ್ ಟೆಸ್ಟ್ ಪಂದ್ಯ ಆಡುತ್ತಿದ್ದರೂ ಅದು ಟೆಸ್ಟ್ ಅನಿಸುವುದೇ ಇಲ್ಲ. ಅವರ ಬ್ಯಾಟಿಂಗ್ ಯಾವಾಗಲೂ ಚುಟುಕು ಕ್ರಿಕೆಟ್‌ನಂತೆಯೇ ಇರುತ್ತದೆ. ಆದ್ದರಿಂದ ಸಹಜವಾಗಿ ಅವರಿಗೆ ಬೇಡಿಕೆ ಲಭಿಸಿದೆ.




ಬೆನ್ ಸ್ಟೋಕ್ಸ್

ಕೆ.ಸಿ.ಕಾರಿಯಪ್ಪ



ಸಮಯದಲ್ಲಿ ಕ್ಯಾನ್ಸರ್‌ನಿಂದ ಬಳಲಿದ ಕಾರಣ ಕೆಲವು ತಿಂಗಳು ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿದರು. ಯುವಿ ನಾಯಕರಾಗಿದ್ದಾಗ ಪುಣೆ ತಂಡ 2011ರ ಐಪಿಎಲ್‌ನಲ್ಲಿ ಒಂಬತ್ತನೇ ಸ್ಥಾನ ಪಡೆಯಿತು. ಎಡಗೈ ಬ್ಯಾಟ್ಸ್‌ಮನ್ ಯುವರಾಜ್ ಆ ವರ್ಷ 14 ಲೀಗ್ ಪಂದ್ಯಗಳಿಂದ 343 ರನ್ ಮಾತ್ರ ಹೊಡೆದಿದ್ದರು. ಆದ್ದರಿಂದ ಇನ್ನು ಪಂಜಾಬ್ ಆಟಗಾರನ ಕ್ರಿಕೆಟ್ ಬದುಕು ಮುಗಿದೇ ಹೋಯಿತು ಅಂದುಕೊಂಡವರೇ ಹೆಚ್ಚು. ಅಚ್ಚರಿಯೆಂದರೆ ಕ್ಯಾನ್ಸರ್‌ನಿಂದ ಗುಣಮುಖರಾದ ಬಳಿಕ ಅವರ ಬೆಲೆ ಏರುತ್ತಲೇ ಹೋಯಿತು. ಮೊದಲಿನ ರೀತಿಯಲ್ಲಿ ಬ್ಯಾಟಿಂಗ್‌ನಲ್ಲಿ ಅಬ್ಬರಿಸದೇ ಇದ್ದರೂ ಮಾರುಕಟ್ಟೆಯಲ್ಲಿ ಯಾವತ್ತೂ 'ಬೆಲೆ' ಕಡಿಮೆಯಾಗಲಿಲ್ಲ.

2014ರ ಆವೃತ್ತಿಯ ಆಟಗಾರರ ಹರಾಜು ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳಿಗೆ ಭಾರಿ ಅಚ್ಚರಿ ನೀಡಿತ್ತು. ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಎಷ್ಟೇ ಕೋಟಿ ಖರ್ಚಾದರೂ ಯುವರಾಜ್ ತಮ್ಮ ತಂಡಕ್ಕೇ ಬೇಕೆಂದು ಪಟ್ಟು ಹಿಡಿದಿದ್ದರು. ಬೇರೆ ಫ್ರಾಂಚೈಸ್‌ಗಳಿಂದಲೂ ಅವರನ್ನು ಖರೀದಿಸಲು ಭಾರಿ ಪೈಪೋಟಿ ಇತ್ತು. ಕೊಹ್ಲಿ ಮಾತಿಗೆ ಮಣಿದು ಆರ್‌ಸಿಬಿ ಫ್ರಾಂಚೈಸ್ 14 ಕೋಟಿ ರೂಪಾಯಿಗೆ ಯುವರಾಜ್ ಅವರನ್ನು ಖರೀದಿಸಿತ್ತು. ಆದರೆ ಒಂದೇ ವರ್ಷದಲ್ಲಿ ತಂಡ ಯುವರಾಜ್ ಜೊತೆಗಿನ ಒಪ್ಪಂದವನ್ನು ರದ್ದು ಮಾಡಿಕೊಂಡಿತು.

ನಂತರದ ವರ್ಷದ ಹರಾಜಿನಲ್ಲಿ ಮತ್ತೆ ಅಚ್ಚರಿಗಳ ಮಹಾಪೂರ. ಏಕೆಂದರೆ ಕಳಪೆ ಫಾರ್ಮ್‌ನಿಂದ ಪರದಾಡುತ್ತಿದ್ದ ಯುವರಾಜ್ ಅವರನ್ನು ಯಾರೂ ಖರೀದಿಸುವುದಿಲ್ಲ ಎನ್ನುವ ಮಾತುಗಳು ಕೇಳಿಬಂದಿದ್ದವು. ಆದರೆ ಯುವರಾಜ್ ಅವರನ್ನು ಡೆಲ್ಲಿ ಡೇರ್‌ಡೆವಿಲ್ಸ್ ತಂಡ 16 ಕೋಟಿಗೆ ಖರೀದಿಸಿತ್ತು!

ಫಾರ್ಮ್ ಕಳೆದುಕೊಂಡರೂ, ಬೇಡಿಕೆ ಇಲ್ಲದಿದ್ದರೂ ಡೆಲ್ಲಿ ಫ್ರಾಂಚೈಸ್ ಕೋಟ್ಯಂತರ ಹಣ ವ್ಯಯ ಮಾಡಿತ್ತು. ಆ ತಂಡ ಕೂಡ ಒಂದೇ ವರ್ಷದಲ್ಲಿ ಯುವರಾಜ್‌ಗೆ ಕೊಕ್ ನೀಡಿತು. ಆದ್ದರಿಂದ ಹೋದ ವರ್ಷದ ಹರಾಜಿನಲ್ಲಿ



ಯುವರಾ